

## ಐತಿಹಾಸಿಕ ಹಿನ್ನೆಲೆಯ ಕೃಷ್ಣ ಕಮಲ...

ಪ್ರತಿಯೊಬ್ಬ ಮನುಷ್ಯನಿಗೆ ಹೆಸರು ಇರುವ ಹಾಗೆ ಪ್ರತಿಯೊಂದು ಹೂವಿಗೂ ಒಂದೊಂದು ಹೆಸರಿದೆ. ಈ ಹೆಸರು ಅವುಗಳ ಬಣ್ಣ, ಆಕಾರ, ಗುಣಗಳ ಆಧಾರದಿಂದ ಬಂದಿರುತ್ತದೆ. ಅದೇ ರೀತಿ ಚಿತ್ರದಲ್ಲಿ ಕಾಣುತ್ತಿರುವ ಹೂವಿಗೆ ಕೃಷ್ಣ ಕಮಲ ಎಂಬ ಹೆಸರು ಬರಲು ಅದರ ಹಿಂದೆ ಒಂದು ಕಾರಣವಿದೆ. ಆ ಕಾರಣವೇನೆಂಬುದನ್ನು ತಿಳಿಯೋಣ ಬನ್ನಿ.

ಈ ಹೂವನ್ನು ಸರಿಯಾಗಿ ಗಮನಿಸಿದರೆ ಹೂವಿನ ಸುತ್ತಲು ನೇರಳೆ ಬಣ್ಣದ ನೂರು ದಳಗಳು ಇರುವುದು ಕಂಡುಬರುತ್ತದೆ. ಈ ನೂರು ದಳಗಳು ಕೌರವರಂತೆ. ಹಾಗೇ ಮಧ್ಯದಲ್ಲಿ ಹಸಿರು ಬಣ್ಣದ ಐದು ಮೊಗ್ಗುಗಳು ಇವೆ. ಇವು ಪಾಂಡವರಂತೆ. ಮಧ್ಯದಲ್ಲಿ ಇರುವ ಮೂರು ಮೊಗ್ಗುಗಳು ತ್ರಿಮೂರ್ತಿಗಳೆಂದೂ(ಬ್ರಹ್ಮ, ವಿಷ್ಣು, ಶಿವ), ಹಾಗೇ ಮಧ್ಯಭಾಗದಲ್ಲಿ ಇರುವುದು ಕೃಷ್ಣನ 'ಸುದರ್ಶನ ಚಕ್ರ'ವೆಂದು ಹೇಳಲಾಗುತ್ತದೆ. ಮಹಾಭಾರತದ ಪ್ರಮುಖರೊಂದಿಗೆ ತಳುಕು ಹಾಕಿಕೊಂಡಿರುವುದರಿಂದ ಇದಕ್ಕೆ 'ಕೃಷ್ಣ ಕಮಲ' ಎನ್ನಲಾಗುತ್ತದೆ.

ಇಂತಹ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಹಿನ್ನೆಲೆಯುಳ್ಳ ಈ ಹೂವನ್ನು ದೇವಾಲಯದ ತೋಟಗಳು, ಮನೆಗಳ ಮುಂದೆ ಮತ್ತು ಬಾಲ್ಕನಿಗಳಲ್ಲಿ ಬೆಳೆಯುತ್ತಾರೆ. ದೈನಂದಿನ ಪೂಜೆಗೆ ಇವನ್ನು ದೇವರಿಗೆ ಅರ್ಪಿಸಲಾಗುತ್ತದೆ. ಈ ಬಳ್ಳಿಯ ಪ್ರಮುಖ ವಿಶೇಷವೇನೆಂದರೆ ಇದು ಹಬ್ಬುವ ಬಳ್ಳಿಯಾಗಿದ್ದು, ಸ್ವಲ್ಪ ಆಧಾರ ದೊರೆತರೆ ಸಮೃದ್ಧವಾಗಿ ಬೆಳೆಯುತ್ತದೆ. ಈ ಬಳ್ಳಿಯು ನೀರು ಬಸಿದು ಹೋಗುವ ಕಡೆ ಮತ್ತು ಫಲವತ್ತಾದ ಮಣ್ಣಿನಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಕೃಷ್ಣಕಮಲವು ದೀರ್ಘಕಾಲಿಕ ಹೂವಾಗಿದ್ದು, ಬೆಚ್ಚಗಿನ ಮತ್ತು ಆರ್ದ್ರ ವಾತಾವರಣದಲ್ಲಿ ಸಮೃದ್ಧಿಯಾಗಿ ಬೆಳೆಯುತ್ತದೆ.

–ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ

## ನೃತ್ಯಕ್ಕೆ ಚಿತ್ರ ಬಹುಮಾನ

ಉಡುಪಿಯ ಶ್ರೀಕೃಷ್ಣ ಮಠದ ಮಧ್ವಮಂಟಪದಲ್ಲಿ ಈಚೆಗೆ ಬೆಂಗಳೂರಿನ ಅನಘ ಮತ್ತು ಅದಿತಿ ಅವರ ಭರತನಾಟ್ಯ ಕಾರ್ಯಕ್ರಮ ನಡೆಯುತ್ತಿತ್ತು. ಸಭಿಕರಲ್ಲಿ ಕೆಲವರು, ಬಿಳಿ ಕಾಗದದ ಮೇಲೆ ಚಕಚಕನೆ ರೇಖೆಗಳನ್ನು ಮೂಡಿಸುತ್ತಿದ್ದ ವ್ಯಕ್ತಿಯೊಬ್ಬರನ್ನು ತದೇಕ ಚಿತ್ತದಿಂದ ನೋಡುತ್ತಿದ್ದರು. ಆ ವ್ಯಕ್ತಿ ಹೆಸರು ಕೊಡವೂರಿನ ಬಾಲಕೃಷ್ಣ ಶೆಟ್ಟಿ. ಎಡಗೈಯಲ್ಲಿ ನೃತ್ಯ ಕಲಾವಿದರ ರೇಖಾಚಿತ್ರವನ್ನು ನಾಟ್ಯಕ್ಕಿಂತ ವೇಗವಾಗಿ ಮೂಡಿಸುವ ಚಾಕಚಕ್ಯತೆಯನ್ನು ಕರಗತ ಮಾಡಿಕೊಂಡವರು. ಅಷ್ಟೇ ಅಲ್ಲ ಕಾರ್ಯಕ್ರಮದ ನಂತರ ಆ ಚಿತ್ರವನ್ನು ಕಲಾವಿದೆಯರಿಗೆ ಸಮರ್ಪಿಸಿ ತಮ್ಮ ಹೃದಯ ವೈಶಾಲ್ಯತೆ ಮೆರೆಯುವ ಗುಣದವರು. ಸಭಿಕರು ತಟ್ಟಿದ ಚಪ್ಪಾಳೆ ಗಾಳಿಯಲ್ಲಿ ಕರಗಿಹೋಗಬಹುದು. ಆದರೆ ಬಾಲಕೃಷ್ಣ ಶೆಟ್ಟಿ ಅವರು ರಚಿಸಿದ ಕೃತಿ ಚಿರಕಾಲ ಉಳಿಯುವಂತಹದ್ದು. ಉಡುಪಿಯ ಅಮೃತಲಿಂಗೇಶ್ವರ ದೇಗುಲದಲ್ಲಿ ಉದ್ಯೋಗದಲ್ಲಿರುವ ಅವರು ಈವರೆಗೆ ಎಂಟು ನೂರಕ್ಕೂ ಹೆಚ್ಚು ಈ ರೀತಿ ಚಿತ್ರ ರಚಿಸಿರುವುದಾಗಿ ತಿಳಿಸಿದರು.

–ವಾ. ಮುರಳೀಧರ, ತೀರ್ಥಹಳ್ಳಿ




## ಗ್ಯಾಕ್ ಹಣ್ಣು ಕಂಡೀರಾ?



ವಿಯೆಟ್ನಾಂ ಮೂಲದ ಈ ಗ್ಯಾಕ್ ಹಣ್ಣು ಈಗ ನಮ್ಮ ಕರಾವಳಿ ಭಾಗದ ಸ್ಥಳೀಯ ಸಸ್ಯವಾಗಿದೆ. ಸಾಕಷ್ಟು ಮಂದಿ ಇದನ್ನು ಬೆಳೆಯುತ್ತಿದ್ದಾರೆ. ವೈಜ್ಞಾನಿಕವಾಗಿ 'ಮೊಮೊರ್ಡಿಕಾ ಕೊಚಿಂಚಿನೆನ್ಸಿಸ್' ಎಂದು ಹೆಸರಿರುವ ಇದು ಬಳ್ಳಿಯಲ್ಲಿ ಗೊಂಚಲು ಗೊಂಚಲಾಗಿ ತೂಗಾಡುತ್ತದೆ. ಕಿತ್ತಳೆ ಬಣ್ಣದ ಹಣ್ಣಿನೊಳಗೆ ಕಡು ರಕ್ತವರ್ಣದ ತಿರುಳಿರುತ್ತದೆ. ತಿನ್ನಲು ಸಿಹಿಯಾಗಿದೆ. ವರ್ಷದಲ್ಲಿ ಎರಡು ಸಲ ಹಣ್ಣುಗಳು ಸಿಗುತ್ತವೆ. ಇದು ಕ್ಯಾನ್ಸರ್ ಗುಣಪಡಿಸುತ್ತದೆ ಎನ್ನುತ್ತವೆ ಮಾಹಿತಿಗಳು.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

